10

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಸಭೆ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 20/6/2020

## ರಾಜ್ಯಸಭೆ ಚುನಾವಣೆ ಫಲಿತಾಂಶ ಪ್ರಕಟ। ಆಂಧ್ರದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಸ್ವೀಪ್

# ಮೂರು ರಾಜ್ಯಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಜಯ

**ನವದೆಹಲಿ:** ರೆಸಾರ್ಟ್ ರಾಜಕೀಯ, ರಾಜೀನಾಮೆ ಮತ್ತು ಲಂಚದ ಆರೋಪಗಳ ನಡುವೆಯೇ ಶುಕ್ರವಾರ 8 ರಾಜ್ಯಗಳ 19 ಸ್ಥಾನಗಳಿಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ತಡ ರಾತ್ರಿ ಗುಜರಾತ್‌ನ 4 ಸ್ಥಾನಗಳ ಫಲಿತಾಂಶ ಪ್ರಕಟವಾಗಿದೆ. ಬಿಜೆಪಿಗೆ 3, ಕಾಂಗ್ರೆಸ್‌ಗೆ 1 ಸ್ಥಾನ ಸಿಕ್ಕಿದೆ. ಫಲಿತಾಂಶದ ಬಗ್ಗೆ ತಕರಾರು ಎದ್ದ ಹಿನ್ನೆಲೆಯಲ್ಲಿ ರಾತ್ರಿ 10 ಗಂಟೆ ಬಳಿಕ ಮತ್ತೊಮ್ಮೆ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲಾಯಿತು. ಇದಕ್ಕೂ ಮೊದಲು 7 ರಾಜ್ಯಗಳ 15 ಸ್ಥಾನಗಳ ಪೈಕಿ ಬಿಜೆಪಿ 5, ಕಾಂಗ್ರೆಸ್ 3, ವೈಎಸ್ಸಾರ್ ಕಾಂಗ್ರೆಸ್ 4 ಸ್ಥಾನಗಳನ್ನು ಬಾಚಿಕೊಂಡವು. ಮಿಜೋರಾಂ ಮತ್ತು ಮೇಘಾಲಯದಲ್ಲಿ ಪ್ರಾದೇಶಿಕ ಪಕ್ಷಗಳು ಗೆದ್ದಿವೆ. ಜಾರ್ಖಂಡ್‌ನಲ್ಲಿ ಒಂದು ಸ್ಥಾನವನ್ನು ಆಡಳಿತಾರೂಢ ಜೆಎಂಎಂ ಪಡೆದುಕೊಂಡಿದೆ.

**ರಾಜಸ್ಥಾನದಲ್ಲಿ ಕೈಗೆ 2, ಬಿಜೆಪಿಗೆ 1:** ರಾಜಸ್ಥಾನದಲ್ಲಿ 3 ಸೀಟುಗಳ ಪೈಕಿ ಎರಡು ಕಾಂಗ್ರೆಸ್ ಹಾಗೂ ಒಂದು ಬಿಜೆಪಿ ಪಾಲಾಗಿದೆ. ಕಾಂಗ್ರೆಸ್‌ನಿಂದ ಕೆ.ಸಿ.ವೇಣುಗೋಪಾಲ್ ಮತ್ತು



**ಪಿಪಿಇ ಕಿಟ್ ಧರಿಸಿ ಭೋಪಾಲದಲ್ಲಿ ಮತ ಹಾಕಲು ಬಂದ ಕೈ ಶಾಸಕ ಕುನಾಲ್ ಚೌಧರಿ**

ನೀರಜ್ ಡಾಂಗಿ, ಬಿಜೆಪಿಯಿಂದ ರಾಜೇಂದ್ರ ಗೆಹ್ಲೋಟ್ ಯಾವುದೇ ಅಡ್ಡಮತದಾನವಿಲ್ಲದೇ ರಾಜ್ಯಸಭೆಗೆ ಪ್ರವೇಶ ಪಡೆದಿದ್ದಾರೆ. ಈ ಮೂಲಕ ರಾಜ್ಯಸಭೆಗೆ ಈವರೆಗೆ ರಾಜಸ್ಥಾನದಿಂದ ಮೂವರು ಆಯ್ಕೆಯಾದಂತಾಗಿದ್ದು,



ಸಿಂದಿಯಾ



ವೇಣುಗೋಪಾಲ್



ದಿಗ್ವಿಜಯ್

ಬಿಜೆಪಿಯ ಸಂಖ್ಯಾಬಲ 7ಕ್ಕೇರಿದೆ.

**ಸಿಂದಿಯಾ, ದಿಗ್ವಿಜಯ್ ಮೇಲ್ಮನೆಗೆ:** ಮಧ್ಯಪ್ರದೇಶದಲ್ಲಿ ನಿರೀಕ್ಷೆಯಂತೆ ಬಿಜೆಪಿಯಿಂದ ಜ್ಯೋತಿರಾದಿತ್ಯ ಸಿಂದಿಯಾ, ಸುಮೇರ್ ಸಿಂಗ್ ಸೋಲಂಕಿ, ಕಾಂಗ್ರೆಸ್‌ನಿಂದ ಹಿರಿಯ ನಾಯಕ ದಿಗ್ವಿಜಯ ಸಿಂಗ್ ಮೇಲ್ಮನೆಗೆ ಎಂಟ್ರಿ ಪಡೆದಿದ್ದಾರೆ.

ಕಾಂಗ್ರೆಸ್‌ನ ಮತ್ತೊಬ್ಬ ಅಭ್ಯರ್ಥಿ, ದಲಿತ ನಾಯಕ ಫೂಲ್ ಸಿಂಗ್ ಬರಿಯಾ ಸೋಲುಂಡಿದ್ದಾರೆ. ಇದೇ ವೇಳೆ, ಸಮಾಜವಾದಿ ಪಕ್ಷದ ಶಾಸಕ ರಾಜೇಶ್ ಶುಕ್ಲಾ ಅವರು ಬಿಜೆಪಿ ಪರ ಮತ ಚಲಾಯಿಸಿದ ಹಿನ್ನೆಲೆಯಲ್ಲಿ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ಇದೇ ವೇಳೆ, ಬಿಜೆಪಿಯ ಇಬ್ಬರು ಶಾಸಕರು ಅಡ್ಡಮತದಾನ ಮಾಡಿರುವ ಆರೋಪ ಎದುರಿಸಿದ್ದಾರೆ.

**ಕ್ಲೀನ್‌ಸ್ವೀಪ್:** ನಿರೀಕ್ಷೆಯಂತೆಯೇ ಎಲ್ಲ ನಾಲ್ಕು ಸ್ಥಾನಗಳನ್ನೂ ಆಡಳಿತಾರೂಢ ವೈಎಸ್ಸಾರ್ ಕಾಂಗ್ರೆಸ್ ಬಾಚಿಕೊಂಡಿದೆ.

**ಉಳಿದೆಡೆ ಏನಾಯ್ತು?:** , ಜಾರ್ಖಂಡ್‌ನ 2 ರಾಜ್ಯಸಭಾ ಸ್ಥಾನಗಳಲ್ಲಿ ಒಂದನ್ನು ಬಿಜೆಪಿಯ ದೀಪಕ್ ಪ್ರಕಾಶ್, ಮತ್ತೊಂದನ್ನು ಆಡಳಿತಾರೂಢ ಜೆಎಂಎಂ ಸ್ಥಾಪಕ, ಮಾಜಿ ಸಿಎಂ ಶಿಬು ಸೊರೇನ್ ತಮ್ಮದಾಗಿಸಿಕೊಂಡಿದ್ದಾರೆ. ಮೇಘಾಲಯದಲ್ಲಿ ಆಡಳಿತಾರೂಢ ನ್ಯಾಷನಲ್ ಪೀಪಲ್ಸ್ ಪಾರ್ಟಿ, ಮಣಿಪುರದಲ್ಲಿ ಬಿಜೆಪಿ ಗೆದ್ದಿವೆ. ಮಿಜೋರಾಂನಲ್ಲಿ ಪ್ರಾದೇಶಿಕ ಪಕ್ಷದ ಅಭ್ಯರ್ಥಿ ಗೆದ್ದಿದ್ದಾರೆ.